# 2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.

## ಎಸ್.ಸಿ ನಂಃ- 167/19

ಪಿ ಡಬ್ಲೂಃ 17

ಸಿ ಡಬ್ಲೂಃ 19

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಲಕ್ಷ್ಮಣ |
| ತಂದೆಯ ಹೆಸರು | ಃ | ಗಿಡ್ಡಯ್ಯ |
| ವಯಸ್ಸು | ಃ | 44 ವರ್ಷ |
| ವೃತ್ತಿ | ಃ | ಹೋಟೆಲ್ ಕೆಲಸ |
| ವಾಸ | ಃ | ಮೈಸೂರು |

ದಿನಾಂಕ 10-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು. ಮೃತ ಲಕ್ಷ್ಮೀ ನನ್ನ ಚಿಕ್ಕಪ್ಪನ ಮಗಳು. ಆಕೆಯು 1 ನೇ ಆರೋಪಿಯ ಸೊಸೆ ಮತ್ತು 2 ನೇ ಆರೋಪಿಯ ಹೆಂಡತಿ.

ಲಕ್ಷ್ಮೀರವರು ಈಗ ಮೃತ ಪಟ್ಟಿದ್ದಾರೆ. ಆಕೆಯು ಸೀಮೆಎಣ್ಣೆಯ ಸ್ಟೌ ಸಿಡಿದು, ಬೆಂಕಿ ತಾಗಿದ್ದರಿಂದ ಮೃತ ಪಟ್ಟರು. ನಾನು ಮೈಸೂರಿನಲ್ಲಿ ವಾಸವಾಗಿದ್ದು ಲಕ್ಷ್ಮೀ ರವರು ಊರಿನಲ್ಲಿ ತೀರಿಕೊಂಡಳು. ಆಕೆಯು ತೀರಿಕೊಂಡ ದಿನಾಂಕ ಮತ್ತು ಇಸವಿಯು ನನಗೆ ನೆನಪಿಲ್ಲ.

ನನ್ನ ಬಳಿ ಒಂದು ಏರ್ ಟೆಲ್ ಕಂಪನಿಯ ಸಿಮ್ ಇತ್ತು. ಅದನ್ನು ನಾನು ಮನೆಯಲ್ಲಿ ಇಟ್ಟಿದ್ದೆ. ಅದನ್ನು ಲಕ್ಷ್ಮೀ ರವರು ತೆಗೆದುಕೊಂಡು ಹೋಗಿ, ಉಪಯೋಗಿಸುತಿದ್ದರು. ಆದರೆ ಆ ಸಿಮ್ ನಂಬರ್ ನನಗೆ ಗೊತ್ತಿಲ್ಲ, ಮರೆತು ಹೋಗಿದೆ, ನೆನಪಿಲ್ಲ. ಈ ವಿಚಾರದಲ್ಲಿ ಪೊಲೀಸರು ನನ್ನ ವಿಚಾರಣೆಯನ್ನು ಮಾಡಿಲ್ಲ ಮತ್ತು ಯಾವುದೇ ಹೇಳಿಕೆಯನ್ನು ನಾನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

ಲಕ್ಷ್ಮೀ ನನ್ನ ಸೋದರ ಸಂಬಂಧಿ ಎಂಬುದು ಸರಿ. ದಿಃ 1-1-18 ರಂದು ರಾತ್ರಿ 10 ರಿಂದ 11 ರ ಸಮಯದಲ್ಲಿ ಆರೋಪಿಗಳ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ತಾಳಲಾರದೇ ಲಕ್ಷ್ಮೀರವರು ತನ್ನ ಮೇಲೆ

ಸೀಮೆಎಣ್ಣೆಯನ್ನು ಸುರಿದುಕೊಂಡು ಬೆಂಕಿಹಚ್ಚಿಕೊಂಡು ಸುಟ್ಟಗಾಯಾಗಳಾಗಿ, ಆಕೆಯನ್ನು ಆಸ್ಪತ್ರೆಗೆ ಸೇರಿದಾಗ ಚಿಕಿತ್ಸೆಯು ಫಲಕಾರಿಯಾಗದೇ ದಿಃ 14-1-18 ರಂದು ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆಂದರೆ ನನಗೆ ಗೊತ್ತಿಲ್ಲ.

ಮೃತ ಲಕ್ಷ್ಮೀ ರವರು 4-5 ವರ್ಷಗಳ ಹಿಂದೆ ನಾವು ಯಾವುದೇ ಕೆಲಸದ ನಿಮಿತ್ತ ಮೈಸೂರಿಗೆ ಹೋಗಿದ್ದಾಗ ಒಂದು ಸಿಮ್ ತೆಗೆದುಕೊಡಿ ಎಂದು ನನ್ನ ಬಳಿ ಕೇಳಿದ್ದಾಗ ಆಕೆಯ ಬಳಿ ಯಾವುದೇ ಗುರುತಿನ ಚೀಟಿ ಇರಲಿಲ್ಲವಾದ್ದರಿಂದ ನನ್ನ ಬಳಿ ಇದ್ದ ಗುರುತಿನ ಚೀಟಿಯನ್ನು ನೀಡಿ, 8197901240 ನಂಬರ್ ನ ಏರ್ಟೆಲ್ ಸಿಮ್ ಕಾರ್ಡನ್ನು ತೆಗೆದುಕೊಟ್ಟಿದ್ದೆ ಎಂದರೆ ಸಿಮ್ ನಂಬರ್ ಸರಿ ಇದೆ. ಉಳಿದ ಅಂಶಗಳನ್ನು ನಿರಾಕರಿಸುತ್ತಿದ್ದೇನೆ. ಅದೇ ಸಿಮ್ ಕಾರ್ಡನ್ನು ಲಕ್ಷ್ಮೀ ಉಪಯೋಗಿಸುತ್ತಿದ್ದಳು ಎಂಬುದು ಸರಿ.

ಆರೋಪಿಗಳು ಕಿರುಕುಳ ನೀಡುತ್ತಿದ್ದ ಕಾರಣದಿಂದ ಲಕ್ಷ್ಮೀ ರವರು ತನ್ನ ಮೇಲೆ ಸೀಮೆಎಣ್ಣೆಯನ್ನು ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ನಂತರ ಮೃತ ಪಟ್ಟ ಎಲ್ಲಾ ವಿಚಾರಗಳು ನನಗೆ ಗೊತ್ತು ಎಂದರೆ ಸರಿಯಲ್ಲ. ಆದರೂ ಸಹ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಲಕ್ಷ್ಮೀ ಬಳಿ ಯಾವುದೇ ಗುರುತಿನ ಚೀಟಿ ಇಲ್ಲದೇ ಇದ್ದ ಕಾರಣ ನಾನೇ ಆಕೆಗೆ ಸಿಮ್ ತೆಗೆದುಕೊಟ್ಟೆ ಎಂದರೆ ಸರಿಯಲ್ಲ. ಸದರಿ ಸಿಮ್ ಕಾರ್ಡನ್ನು ಮನೆಯಲ್ಲಿ ಇಟ್ಟಿದ್ದಾಗ ತೆಗೆದುಕೊಂಡಳು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರ ಬಳಿ ಆ ರೀತಿ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

ನಾನು ಪೊಲೀಸರ ಸಮಕ್ಷಮ ಲಕ್ಷ್ಮೀಗೆ ಈಕೆಯ ಗಂಡ - - - - - - - - - - - - - - - - - - - ತೆಗೆದು ಕೊಟ್ಟಿದ್ದೆನು ಎಂದು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿದಾರರಿಗ ತನಿಖಾಧಿಕಾರಿಗಳ ಮುಂದೆ ನೀಡಿದ್ದಾರೆಂಬ ಹೇಳಿಕೆ ಓದಿ ಹೇಳಿದಾಗ ನಿರಾಕರಿಸಿದ್ದು, ಸದರಿ ಹೇಳಿಕೆ ಭಾಗವನ್ನು ನಿಪಿ22 ಎಂದು ಗುರುತಿಸಲಾಯಿತು.

ನಾನು ನಿಪಿ 22 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ನೀಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗ ತೋರಿಸಿದ ಅರ್ಜಿ ನಾನು ಸಿಮ್ ಕಾರ್ಡನ್ನು ಪಡೆದುಕೊಳ್ಳುವಾಗ ನೀಡಿದ್ದ ಅರ್ಜಿ ಆಗಿದೆ ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಪಿ23 ಎಂದು ಗುರುತಿಸಲಾಯಿತು. ನಾನು ಲಕ್ಷ್ಮೀಗೆ ಸಿಮ್ ಕಾರ್ಡನ್ನು ತೆಗೆದು ಕೊಟ್ಟಾಗ ನಿಪಿ 23 ಅರ್ಜಿಯನ್ನು ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಅರ್ಜಿಯನ್ನು ನೀಡಿ ಸಿಮ್ ತೆಗೆದುಕೊಂಡು ಮನೆಯಲ್ಲಿಟ್ಟಿದ್ದೆ ಅದನ್ನು ಲಕ್ಷ್ಮೀ

ರವರು ತೆಗೆದುಕೊಂಡಿದ್ದಾರೆ. ಈಗ ತೋರಿಸಿದ ಗುರುತಿನ ಚೀಟಿ ನನ್ನದಾಗಿದ್ದು, ಸಾಕ್ಷಿದಾರರು ಗುರುತಿಸಿದ ದಾಖ್ಲೆಯನ್ನು ನಿಪಿ24 ಮತ್ತು 25 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ-

ನಾನು ಸಿಮ್ ಕಾರ್ಡನ್ನು ತೆಗೆದುಕೊಂಡು ಬಹಳಷ್ಟು ವರ್ಷಗಳಾಗಿತ್ತು, ಅದನ್ನು ತೆಗೆದುಕೊಂಡು ಮನೆಯಲ್ಲೇ ಇಟ್ಟಿದ್ದೆ. ಲಕ್ಷ್ಮೀ ನನ್ನನ್ನು ಕೇಳಿ ಆ ಸಿಮ್ ಕಾರ್ಡನ್ನು ಪಡೆದುಕೊಂಡಿಲ್ಲ. ನಿಪಿ 23 ರಿಂದ 25 ದಾಖ್ಲೆಗಳನ್ನು ನಾನು ಪೊಲೀಸರಿಗೆ ನೀಡಿಲ್ಲ. ಅದನ್ನು ಎಷ್ಟು ವರ್ಷಗಳ ಹಿಂದೆ ತೆಗೆದುಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಮೈಸೂರಿನಲ್ಲಿದ್ದ ಕಾರಣ ಆ ಯಾವುದೇ ವಿಚಾರಗಳು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

*(ಸಾಕ್ಷಿಯ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

*ಓ.ಹೇ.ಕೇ. ಸರಿ ಇದೆ.*

*2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್*
*ನ್ಯಾಯಾಧೀಶರು, ಹಾಸನ.*